ಬ್ಯಾಂಕಿನವರು ಸಹಿತ ಸರಿಯಾದ ರೀತಿಯಲ್ಲಿ ಸಾಲವನ್ನು ಕೊಡುತ್ತಿಲ್ಲ. ನಾಳೆ ನಾಡಿದ್ದು ಬನ್ನಿ ಎಂದು ಓಡಾಡಿಸುತ್ತಿದ್ದಾರೆ. ಈ ರೀತಿಯ ಅನೇಕ ತೊಂದರೆಗಳನ್ನು ಕೊಡುತ್ತಿರುವುದರಿಂದ ಸಾಲ ಪಡೆಯುತ್ತ ಕ್ಕವರು ಸಾಲವೇ ಬೇಡವೆಂದು ಬಿಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಸರ್ಕಾರದವರು ಒಂದು ಶಿಂಗಳಿಗೆ ಒಂದು ಸಾವಿರ ಚಿಕ್ಕ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮತ್ತು ಮಾನ್ಯ ಮಂತ್ರಿಗಳು ಬಹಳಷ್ಟು ಸಾರಿ ಹೇಳಿದ್ದಾರೆ. ಈ ಚಿಕ್ಕ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡುವುದರಲ್ಲಿ ಬಹಳಷ್ಟು ವಿಳಂಬವಾಗುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬ್ಯಾಡಗಿ ತಾಲ್ಲೂಕಿನಲ್ಲಿ ೩೨ ಯೂನಿಟ್‌ಗಳು ಖಾಯಂ ಆಗಿ ರಿಜಿಸ್ಟರ್ ಆಗಿವೆ. ಅದರಲ್ಲಿ ೧೨ ಕೈಗಾರಿಕೆಗಳಿಗೆ ಬ್ಯಾಂಕಿನವರು ೫.೬೮ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಉಳಿದ ಕೈಗಾರಿಕೆಗಳಿಗೆ ಕೊಡುವ ವಿಚಾರದಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಬ್ಯಾಂಕಿನವರು ಹಣ ಕೊಡುವುದಕ್ಕೆ ಮೊದಲು ಕೆಲವು ಮಾಹಿತಿಗಳನ್ನು ಪಡೆದು ಕೊಳ್ಳಬೇಕಾಗುತ್ತದೆ.

ಶ್ರೀ ಹೆಗ್ಗಪ್ಪ.—ಸ್ವಾಮಿ, ಈಗಾಗಲೇ ಎಷ್ಟು ಘಟಕಗಳು ಸ್ಥಾಪನೆಯಾಗಿವೆ. ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಬ್ಯಾಡಗಿ ತಾಲ್ಲೂಕಿನಲ್ಲಿ ಈ ಘಟಕಗಳನ್ನು ಆದಷ್ಟು ಬೇಗ ಸ್ಥಾಪನೆ ಮಾಡುವ ಸಲುವಾಗಿ ವಿಶೇಷ ಆಸಕ್ತಿಯನ್ನು ತೆಗೆದುಕೊಂಡು ಪ್ರಯತ್ನ ಮಾಡಬೇಕು. ಇದು ಅತಿ ಹಿಂದುಳಿದ ತಾಲ್ಲೂಕು. ಪಿ.ಡಬ್ಲ್ಯೂ.ಡಿ ಇಲಾಖೆಯಂವರು, ಬೇರೆ ಇಲಾಖೆಯವರು ಈ ತಾಲ್ಲೂಕಿನ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಆದುದರಿಂದ ಆ ಭಾಗದಲ್ಲಿ ಸಣ್ಣ ಕೈಗಾರಿಕಾ ಘಟಕಗಳನ್ನು ಬೇಗನೆ ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಿಗೆ ಕಳಕಳಿ ಏನಿದೆಯೆಂಬುದು ನನಗೂ ಅರ್ಥವಾಗಿದೆ. ಬ್ಯಾಡಗಿ ತಾಲ್ಲೂಕಿನಲ್ಲಿ ಯಾವ ಕೈಗಾರಿಕೆಗಳನ್ನೂ ಬ್ಯಾಂಕಿನವರು ನಿರ್ಲಕ್ಷ್ಯ ಮಾಡಿಲ್ಲ. ಆದಷ್ಟು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಕೈಗಾರಿಕೆ ಪ್ರಾರಂಭಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಅರ್ಜಿ ಸಲ್ಲಿಸಿರುವ ಬಗ್ಗೆ

೧೩೮೪ ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಕೈಗಾರಿಕೆ ಪ್ರಾರಂಭಿಸಲು ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಅರ್ಜಿ ಸಲ್ಲಿಸಿರುತ್ತಾರೆ.

ಆ) ಇವರಲ್ಲಿ ಎಷ್ಟು ಜನಕ್ಕೆ ಕೈಗಾರಿಕೆಗಳನ್ನು ಪ್ರಾರಂಭಿಸಲು ಪರವಾನಗಿ ನೀಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು).—

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಂದ ೩೫ ಅರ್ಜಿಗಳು ಬೇರೆಯವರಿಂದ ೨೫ ಅರ್ಜಿಗಳು.

ಆ) ೩೧.

ಶ್ರೀ ನಾರಾಯಣರಾವ್ ಮನಹಳ್ಳಿ.—ಸ್ವಾಮಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಂದ ೩೫ ಅರ್ಜಿಗಳು, ಮತ್ತು ಬೇರೆಯವರಿಂದ ೨೫ ಅರ್ಜಿಗಳು ಬಂದಿವೆಯೆಂದು ಹೇಳಿದಿರಿ. ಇದರಲ್ಲಿ ೩೧ ಕೈಗಾರಿಕಾ ಘಟಕಗಳಿಗೆ ಲೈಸೆನ್ಸ್ ಕೊಡಲಾಗಿದೆ ಎಂದು ಹೇಳಿದಿರಿ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗ ಸೇರಿ ಒಟ್ಟು ೬೦ ಕೈಗಾರಿಕೆಗಳಾಗುತ್ತದೆ. ಈ ಪೈಕಿ ೩೧ ಘಟಕಗಳಿಗೆ ಕೊಟ್ಟಿದ್ದೀರಿ. ಈ ರೀತಿ ಲೈಸೆನ್ಸ್ ಕೊಟ್ಟಿರುವುದರಲ್ಲಿ ಸಣ್ಣ ಪ್ರಮಾಣದ, ದೊಡ್ಡ ಪ್ರಮಾಣದ, ಮಧ್ಯಮ ಪ್ರಮಾಣದ ಉದ್ದಿಮೆಗಳು ಇವೆಯೇ, ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಟ್ಟು ೬೦ ಕೈಗಾರಿಕೆಗಳ ಪೈಕಿ ೩೧ ಕೈಗಾರಿಕೆಗಳಿಗೆ ಲೈಸೆನ್ಸ್ ಕೊಡಲಾಗಿದೆ. ಇವುಗಳೆಲ್ಲವೂ ಚಿಕ್ಕ ಕೈಗಾರಿಕೆಗಳು. ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳು ಇಲ್ಲ. ಇದಕ್ಕೆ ಬೇಕಾದ ಮಾಹಿತಿಯನ್ನು ಬೇಕಾದರೆ ಆಮೇಲೆ ಕೊಡುತ್ತೇನೆ.

ಶ್ರೀ ಬಿ. ಶಿವಣ್ಣ.--ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟಜಾತಿ ಮಂತ್ತು ಪರಿಶಿಷ್ಟ ವರ್ಗದವರಿಗೆ ಎಷ್ಟು ಕೈಗಾರಿಕೆಗಳನ್ನು ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ --ಇದನ್ನು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಹೆಗ್ಗಪ್ಪ.--ಈಗ ಲೈಸೆನ್ಸ್ ಕೊಟ್ಟಿರುವ ಉದ್ದಿಮೆಗಳು ಬೀದರ್ ಜಿಲ್ಲೆಯಲ್ಲಿ ಇವೆಯೇ ಅಥವಾ ಬೇರೆ ಕಡೆಗಳಲ್ಲಿ ಇವೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.--ಬೀದರ್ ಜಿಲ್ಲೆಗೆ ಸಂಬಂಧಪಟ್ಟದ್ದು ಮಾತ್ರ ಇದರಲ್ಲಿ ಇದೆ. ಬೇರೆ ಜಿಲ್ಲೆ ವಿಚಾರ ಇದರಲ್ಲಿ ಇಲ್ಲ.

ANNOUNCEMENT

MR. SPEAKER.—I have received the following Message from the Chairman, Legislative Council : "As required by Rule 115 of the Rules of Practice and Procedure in the Legislative Council, I transmit herewith the Karnataka Muncipalities (Amendment) Bill 1984 for the concurrence of the Legislative Assembly to the amendments effected to by the Legislative Council on 11th April, 1984." and another message, which reads :

"As required by rule 115 of the rules of practice and procedure in the Legislative Council, I transmit herewith the Karnataka Education Bill, 1983, for the concurrence of the Legislative Assembly to the amendments effected to by the Legislative Council on 11th April. 1984."

PAPERS LAID ON THE TABLE

SRI S. R. BOMMAI (Min. for Industries and Commerce)....Sir, on behalf of Sri Ramakrishna Hegde, (Chief Minister), I beg to lay :

Report of the Comptroller and Auditor General of India for the year 1982-83 (Revenue Receipts), as required under Article 151 (2) of the Constitution of India.

MR. SPEAKER.—Papers laid.

MR. SECRETARY.—I beg to lay :

"A copy of the Karnataka Education Bill, 1983, as passed by the Legislative Council, with amendments under Rule 109 of the Rules of Procedure and Conduct of Business in the Karnataka Legislative Assembly.

A copy of the Karnataka Muncipalities (Amendment) Bill 1984, as passed by the Legislative Council, with amendments, under Rule 109 of the Rules of Procedure and Conduct of Business in the Karnataka Legislative Assembly."

MR. SPEAKER.—Papers laid.